S C.R.P.67

Form No.4
(Criminal)
Deposition
Sheets
(R.P.No.57)

# 5ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮಂಡ್ಯ

## ಸ್ಪೆಷಲ್ ಕೇಸ್ ನಂಬರ್: 362/2018

**ಚಾ.ಸಾ.–06 ಪ್ರಾ.ಸಾ.–04**

| | |
|---|---|
| **ಸಾಕ್ಷಿದಾರರ ಹೆಸರು** | **ವೀರಪ್ಪ** |
| **ತಂದೆಯ ಹೆಸರು** | **ಮಾಯಿಗೌಡ** |
| **ವಯಸ್ಸು** | **60 ವರ್ಷಗಳು** |
| **ಉದ್ಯೋಗ** | **ವ್ಯವಸಾಯ** |
| **ವಾಸ** | **ವಳಗೆರೆಹಳ್ಳಿ ಗ್ರಾಮ, ಮದ್ದೂರು ತಾಲ್ಲೂಕು** |

**ದಿನಾಂಕ: 28.11.2025 ರಂದು ಪ್ರಮಾಣವಚನ ಬೋಧಿಸಲಾಯಿತು**

**ಮುಖ್ಯ ವಿಚಾರಣೆ: ಮಾನ್ಯ ವಿಶೇಷ ಸರ್ಕಾರಿ ಅಭಿಯೋಜಕರಿಂದ**

1) ಚಾಸಾ–1, 2, 3 ರವರ ಪರಿಚಯ ನನಗೆ ಇದೆ. ಅವರು ನಮ್ಮ ಗ್ರಾಮದವರು. ಅವರು ಪರಿಶಿಷ್ಟ ಜಾತಿಗೆ ಸೇರಿದವರು. ನನಗೆ ಚಾಸಾ- 4, 5, 7, 8, 9, 10, 11 ರವರ ಪರಿಚಯುವಿದೆ. ಅವರೆಲ್ಲರು ನಮ್ಮ ಗ್ರಾಮದವರು. ಚಾಸಾ-12 ರವರ ಪರಿಚಯ ನನಗೆ ಇದೆ. ಅವರು ನಮ್ಮ ಗ್ರಾಮ ಪಂಚಾಯಿತಿಯ ಪಿಡಿಒ ಆಗಿದ್ದರು. ನಮ್ಮ ಗ್ರಾಮ ಪಂಚಾಯಿತಿಯಲ್ಲಿ ಹಿಂದೆ ಪಿಡಿಒ ಆಗಿದ್ದ ರೂಪೇಶ್ ಕುಮಾರ್ ರವರ ಪರಿಚಯ ನನಗೆ ಇದೆ.

2) ಈ ದಿನ ನ್ಯಾಯಾಲಯದ ಮುಂದಿರುವ 2, 4 ರಿಂದ 7ನೇ ಆರೋಪಿತರ ಪರಿಚಯ ನನಗೆ ಇದೆ. (Witness identified accused Nos.2, 4 to 7 in the dock) 3 ಮತ್ತು 8ನೇ ಆರೋಪಿತರ ಪರಿಚಯ ನನಗೆ ಇದೆ. (learned Counsel for Accused Nos. 3 and 8 submits that there is no identity dispute with respect to accused Nos. 3 and 8). ಅವರು ಒಕ್ಕಲಿಗ

ಜಾತಿಗೆ ಸೇರಿದವರು. ಪಿಡಿಒ ರೂಪೇಶ್ ಕುಮಾರ್ ರವರು ಯಾವ ಜಾತಿಗೆ ಸೇರಿದವರು ಎಂದು ನನಗೆ ಗೊತ್ತಿಲ್ಲ.

3) ಈ ಪ್ರಕರಣದ ಬಗ್ಗೆ ನನಗೆ ಯಾವುದೇ ಮಾಹಿತಿ ಇರುವುದಿಲ್ಲ. ಈ ಪ್ರಕರಣದ ಆರೋಪಿತರು ಮತ್ತು ರೂಪೇಶ್ ಕುಮಾರ್ ರವರು ಚಾಸಾ-1 ರಿಂದ 3 ರವರ ಮನೆಗೆ ಅತಿಕ್ರಮ ಪ್ರವೇಶ ಮಾಡಿ ಅವರನ್ನು ಜಾತಿ ನಿಂದನೆ ಮಾಡಿ ಬೈದು ಹಲ್ಲೆ ಮಾಡಿರುತ್ತಾರೆ ಎನ್ನುವ ಸಂಗತಿಯನ್ನು ನಾನು ನೋಡಿರುವುದಿಲ್ಲ. ಅವರ ಜಗಳವನ್ನು ನಾನು ಬಿಡಿಸಿರುವುದೂ ಇಲ್ಲ. ಈ ಪ್ರಕರಣದ ಗಲಾಟೆಯನ್ನು ನೋಡಿರುತ್ತೇನೆ ಎಂದು ನಾನು ಪೋಲೀಸರಿಗೆ ಹೇಳಿರುವುದಿಲ್ಲ. ನಾನು ಪೋಲೀಸರ ಮುಂದೆ ಯಾವುದೇ ಹೇಳಿಕೆಯನ್ನು ನೀಡಿರುವುದಿಲ್ಲ.

**(ಈ ಹಂತದಲ್ಲಿ ಮಾನ್ಯ ಸರಕಾರಿ ಅಭಿಯೋಜಕರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟಿ ಸವಾಲು ಮಾಡಲು ಅನುಮತಿ ಕೋರಿದ ಮೇರೆಗೆ ಪರಿಶೀಲಿಸಿ ಭಾರತೀಯ ಸಾಕ್ಷ್ಯ ಅಧಿನಿಯಮ ಕಲಂ 157ರ ಪ್ರಕಾರ ಅನುಮತಿ ಕೊಡಲಾಯಿತು.)**

**ಪಾಟೀಸವಾಲುಃ ಮಾನ್ಯ ವಿಶೇಷ ಸರ್ಕಾರಿ ಅಭಿಯೋಜಕರಿಂದ**

4) ದಿಃ01.09.2017 ರಂದು ನಾನು ಮದ್ದೂರು ಪೋಲೀಸರ ಮುಂದೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ನಮ್ಮ ಗ್ರಾಮದಲ್ಲಿರುವ ಕಟಿಂಗ್ ಶಾಪ್ ಗಳಲ್ಲಿ ದಲಿತರಿಗೆ ಕ್ಷೌರ ಮಾಡುತ್ತಿರಲಿಲ್ಲ, ಈ ಬಗ್ಗೆ ಚಾಸಾ- 1 ರವರು ಗ್ರಾಮ ಮುಖಂಡರಿಗೆ ಹೇಳಿ ಗ್ರಾಮ ಸಭೆ ಕರೆಸಿ ಗ್ರಾಮದಲ್ಲಿ ಶಾಂತಿ ಸಭೆ ಮಾಡಿಸಿದ್ದರು ಎಂದರೆ ಸರಿಯಲ್ಲ. ದಿಃ31.08.207 ರಂನದು ಬೆಳಿಗ್ಗೆ 8.30 ಗಂಟೆ ಸಮಯದಲ್ಲಿ ನಾನು ಗದ್ದೆಯ ಕಡೆಗೆ ಹೋಗುವಾಗ ಆಗ ಗ್ರಾಮ ಪಂಚಾಯಿತಿ ಪಿಡಿಒ ಆಗಿದ್ದ ರೂಪೇಶಕುಮಾರ್ ರವರು ಮತ್ತು ಈ ಪ್ರಕರಣದ ಇತರ ಆರೋಪಿತರು ಚಾಸಾ- 1 ರವರ ಮನೆಯ ಬಳಿ ಹೋಗುತ್ತಿದ್ದಾಗ ಆ ಸಮಯ ನಾನು ಅವರು ಮನೆಯ ಕಡೆಗೆ ಹೋಗಿದ್ದೆ ಎಂದರೆ ಸರಿಯಲ್ಲ. ಆ ಸಮಯ ರೂಪೇಶ್ ಕುಮಾರ್ ಮತ್ತು ಆರೋಪಿತರು ಚಾಸಾ- 2 ರವರಿಗೆ ಅವರ ಮನೆಯನ್ನುಖಾಲಿ ಮಾಡಬೇಕೆಂದು ತಿಳಿಸಿದಾಗ ಚಾಸಾ- 1 ರಿಂದ 3 ರವರು ಮನೆ ಖಾಲಿ ಮಾಡುವುದಿಲ್ಲ ಎಂದು ಹೇಳಿದರು ಎಂದರೆ ಸರಿಯಲ್ಲ. ಆ ಸಮಯ ರೂಪೇಶ್ ಕುಮಾರ್ ಮತ್ತು ಇತರ ಆರೋಪಿತರೆಲ್ಲರು ಚಾಸಾ- **1** ರಿಂದ **3**

ರವರ ಮನೆಯ ಒಳಗೆ ನುಗ್ಗಿ ಮನೆಯಲ್ಲಿದ್ದ ಅಡಿಗೆ ಮತ್ತು ಇತರ ಪದಾರ್ಥಗಳನ್ನು ಮತ್ತು ಪಾತ್ರೆಗಳನ್ನು ರೂಪೇಶ್ ಕುಮಾರ್ ಮತ್ತು ಇತರ ಆರೋಪಿತರು ಸೇರಿ ಹೊರಗೆ ಹಾಕಿದರು ಎಂದರೆ ಸರಿಯಲ್ಲ. ಅದನ್ನು ಕೇಳಿದ ಚಾಸಾ- **1** ರಿಂದ **3** ರವರಿಗೆ ರೂಪೇಶ್ ಕುಮಾರ್ ಮತ್ತು ಇತರ ಆರೋಪಿತರು ಸೇರಿ ಜಾತಿ ನಿಂದನೆ ಮಾಡಿ ಬೈದು ಹಲ್ಲೆ ಮಾಡಲು ಪ್ರಯತ್ನಿಸಿದರು ಎಂದರೆ ಸರಿಯಲ್ಲ. ನಂತರ ಕಟಿಂಗ್ ಶಾಪ್ ಸಾಮಾನುಗಳನ್ನು ಅವರ ಮನೆಗೆ ತಂದಿಟ್ಟಿದ್ದನ್ನು ರೂಪೇಶ್ ಕುಮಾರ್ ಮತ್ತು ಇತರೆ ಆರೋಪಿತರು ವಾಪಸ್ಸು ತೆಗೆದುಕೊಂಡು ಹೋದರು ಎಂದರೆ ಸರಿಯಲ್ಲ. ಇದನ್ನೆಲ್ಲಾ ನಾನು ನೋಡಿರುತ್ತೇನೆ ಎಂದರೆ ಸರಿಯಲ್ಲ. ಈ ಬಗ್ಗೆ ನಾನು ಪೋಲೀಸರಿಗೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. **"**ನಮ್ಮ ಗ್ರಾಮದ............**...** .............**...** ............**...** ............**...** ............**...** ............**...** ತೆಗೆದುಕೊಂಡು ಹೋದರು" ಎಂಬ ಹೇಳಿಕೆಯನ್ನು ಪೊಲೀಸರಿಗೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯ ಭಾಗವನ್ನು **ನಿಪಿ.6** ಎಂದು ಗುರುತಿಸಲಾಯಿತು.

**5)** ಆರೋಪಿತರ ಜೊತೆಗೆ ಅನ್ಯೋನ್ಯವಾಗಿ ಇದ್ದೇನೆ ಎಂದರೆ ಸರಿ. ಈ ದಿನ ನ್ಯಾಯಾಲಯಕ್ಕೆ ಆರೋಪಿತರೆ ನನ್ನನ್ನು ಕರೆದುಕೊಂಡು ಬಂದಿರುತ್ತಾರೆ ಎಂದರೆ ಸರಿಯಲ್ಲ. ಅವರ ಜೊತೆಗೆ ನಾನು ಅನ್ಯೋನ್ಯವಾಗಿರುವ ಕಾರಣ ಆರೋಪಿತರಿಗೆ ಸಹಾಯ ಮಾಡುವ ಸಲುವಾಗಿ ಎಲ್ಲಾ ವಿಚಾರ ಗೊತ್ತಿದ್ದರೂ ಗೊತ್ತಿಲ್ಲ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀಸವಾಲುಃ ಆರೋಪಿತರ ಪರ ಶ್ರೀ ಹೆಚ್.ಡಿ.ಆರ್ ವಕೀಲರಿಂದಃ**

**6)** ಇಲ್ಲ ಎಂದು ನುಡಿಯುತ್ತಾರೆ.

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿದೆ)

ಓದಿ ಹೇಳಿ ಕೇಳಿ ಸರಿ ಇದೆ ಎಂದು ಒಪ್ಪಿದೆ

**(ಮಂಜುಳಾ ಇಟ್ಟಿ)**
5ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ
ನ್ಯಾಯಾಲಯ, ಮಂಡ್ಯ